ಒಂದು ಬಕೀಟು ನೀರನ್ನು ವಾಂತಿ ಮಾಡಿದ ಮೇಲೆ ಟೇಪಚೂ ಮುಗುಳ್ನಕ್ಕ. ಅವನು ಎದ್ದು ಹೇಳಿದ, 'ಚಿಕ್ಕಪ್ಪ, ಸ್ವಲ್ಪ ಕಮಲದ ಹೂಗಳನ್ನು ಕೆರೆಯಿಂದ ಕಿತ್ತು ಕೊಡ್ತೀರ? ನಾನು ತುಂಬಾ ಕೊಯ್ದಿದ್ದೆ. ಆದರೆ, ಎಲ್ಲವೂ ಕೈಬಿಟ್ಟು ಹೋದವು. ಹೊಟ್ಟೆ ತುಂಬಾ ಹಸಿದಿದೆ.'

ಪರಮೇಸುರಾ ಎಮ್ಮೆಗೆ ಹೊಡೆಯುವ ಕೋಲಿನಿಂದ ಟೇಪಚೂವಿನ ಪೃಷ್ಠಕ್ಕೆ ನಾಲ್ಕೈದು ಬಾರಿ ಹೊಡೆದು, ಅವನನ್ನು ಹಳಿಯುತ್ತಾ ಮರಳಿ ಹೋದ.

ಹಳ್ಳಿಯ ಹೊರಗೆ ಕಸ್ಬೆಗೆ ಹೋಗುವ ರಸ್ತೆಯ ಅಂಚಿನಲ್ಲಿ ಸರ್ಕಾರಿ ನರ್ಸರಿಯಿತ್ತು. ಅಲ್ಲಿ ಪ್ಲಾಂಟೇಶನ್ ಕೆಲಸ ನಡೆಯುತ್ತಿತ್ತು. ಬಿಡಲಾ ಪೇಪರ್ ಮಿಲ್‌ಗಾಗಿ ಬಿದಿರು, ಸಾಗವಾನಿ ಮತ್ತು ಯೂಕಲಿಪ್ಟಸ್ ಮರಗಳನ್ನು ಹಾಕಲಾಗಿತ್ತು. ಅದೇ ನರ್ಸರಿಯಲ್ಲಿ, ಸಾಕಷ್ಟು ಒಳಗೆ ತಾಳೆ ಮರಗಳಿದ್ದವು. ಹಳ್ಳಿಯಲ್ಲಿ ಸೇಂದಿ ಕುಡಿಯುವವರ ಸಂಖ್ಯೆ ಭರ್ಜರಿಯಿತ್ತು. ಬಹುತೇಕ ಆದಿವಾಸಿ ಕೂಲಿಕಾರರು ಪಿ.ಡಬ್ಲೂ. ಡಿ.ಯಿಂದ ರಸ್ತೆ ನಿರ್ಮಿಸುವ ಮತ್ತು ದೂಳು-ಜಲ್ಲಿ ಕಲ್ಲುಗಳನ್ನು ಹಾಕುವ ಕೆಲಸವನ್ನು ಮಾಡುತ್ತಿದ್ದರು. ಹಗಲಿಡಿಯ ಕೆಲಸದ ನಂತರ ದಣಿದ ಅವರು ರಾತ್ರಿ ವೇಳೆಯಲ್ಲಿ ಸೇಂದಿ ಕುಡಿದು ಮಲಗಿಬಿಡುತ್ತಿದ್ದರು. ಮೊದಲು ಇವರು ಸಂಜೆಯ ವೇಳೆಗೆ ಮಡಿಕೆಯನ್ನು ಮರಕ್ಕೆ ಕಟ್ಟುತ್ತಿದ್ದರು. ತಾಳೆ ಮರ ನೇರವಾಗಿರುತ್ತದೆ. ಈ ಮರವನ್ನೇರುವ ಸಾಹಸವನ್ನು ಹಲ್ಲಿ ಅಥವಾ ಕೂಲಿಗಳು ಮಾತ್ರ ಮಾಡಲು ಸಾಧ್ಯ. ಬೆಳಗ್ಗೆಯವರೆಗೆ ಮಡಿಕೆಯಲ್ಲಿ ಸೇಂದಿ ಜಮಾವಣೆಗೊಳ್ಳುತ್ತಿತ್ತು. ಜನ ಅದನ್ನು ಇಳಿಸುತ್ತಿದ್ದರು.

ತಾಳೆ ಮರವನ್ನು ಹತ್ತಲು ಬಿದಿರಿನ ಏಣಿಯನ್ನು ಮಾಡುತ್ತಿದ್ದರು. ಅದರ ಮೇಲೆ ಕಾಲಿಟ್ಟು ಹತ್ತುತ್ತಿದ್ದರು. ಇದರಲ್ಲಿ ಬೀಳುವ ಅಪಾಯ ಅಷ್ಟಿರಲಿಲ್ಲ. ಒಂದು ವೇಳೆ ಅಷ್ಟು ಎತ್ತರದಿಂದ ಯಾರಾದರೂ ಬಿದ್ದರೆ ಅವನ ಮೂಳೆಗಳು ಚೂರು-ಚೂರಾಗುತ್ತಿದ್ದವು.

ಈಗ ಕಿಶನಪಾಲ್ ಆ ಮರಗಳ ಒಡೆಯನಾಗಿದ್ದ. ಶ್ಯಾನುಭೋಗ ಆ ಸರ್ಕಾರಿ ನರ್ಸರಿಯ ಒಳಭಾಗದ ಆ ಜಮೀನನ್ನು ಕಿಶನಲಾಲ್ ಸಿಂಗ್‌ನ ಹೆಸರಿಗೆ ಹಕ್ಕುಪತ್ರ ಕೊಡಿಸಿದ್ದ. ಈಗ ತಾಳೆಯ ಸೇಂದಿಯನ್ನು ಇಳಿಸುವ ಕೆಲಸವನ್ನು ಅವನೇ ಮಾಡುತ್ತಿದ್ದ. ಗ್ರಾಮ ಪಂಚಾಯತಿ ಭವನದ ಸಭೆಯಲ್ಲಿ ಮಹಾತ್ಮಾ ಗಾಂಧೀಜಿಯವರ ಫೋಟೊ ಹಾಕಲಾಗಿದ್ದು, ಅದರ ಕೆಳಗೆ ಸಂಜೆ ವೇಳೆಯಲ್ಲಿ ತಾಳೆಯ ಸೇಂದಿಯನ್ನು ಹಂಚಲಾಗುತ್ತಿತ್ತು. ಕೋಣೆಯ ಒಳಗೆ ಮತ್ತು ಹೊರಗೆ ಸೇಂದಿ ಕುಡಿಯುವ ಕೂಲಿಕಾರರು ಕಲೆಯುತ್ತಿದ್ದರು. ಕಿಶನಲಾಲ್ ಸಿಂಗ್‌ಗೆ ಒಳ್ಳೆಯ ಆದಾಯ ಬರುತ್ತಿತ್ತು.

ಒಮ್ಮೆ ಟೇಪಚೂ ಸಹ ಸೇಂದಿಯ ರುಚಿ ನೋಡಲು ಬಯಸಿದ. ಹಳ್ಳಿಯ ಜನ ಸೇಂದಿ ಕುಡಿದಾಗ ಅವರ ಕಣ್ಣುಗಳಲ್ಲಿ ಆಹ್ಲಾದ ಬರುವುದನ್ನು, ಅವರ ಮುಖದಲ್ಲಿ ಸುಖ ಮೂಡುವುದನ್ನು ಹಾಗೂ ಮಂದ-ಮಂದ ಮುಗುಳ್ನಗೆ ಕಿವಿಗಳವರೆಗೆ ಹಬ್ಬುವುದನ್ನು ಟೇಪಚೂ ನೋಡಿದ. ಅವರು ಆನಂದದಲ್ಲಿ ಮೈಮರೆತು ಸಾಲ್ಗೋ-ದಾದರ್ ಹಾಡನ್ನು ಹಾಡುತ್ತಿದ್ದರು. ಗಹಗಹಿಸಿ ನಗುತ್ತಾ ಒಬ್ಬರು ಇನ್ನೊಬ್ಬರ ತಾಯಿ-ಸಹೋದರಿಯರನ್ನು ನಿಂದಿಸುತ್ತಿದ್ದರು. ಆದರೆ, ಇದನ್ನು ಯಾರೂ ತಪ್ಪಾಗಿ ಭಾವಿಸುತ್ತಿರಲಿಲ್ಲ. ಜನ ಪ್ರೀತಿಯ ಆಳ ಸಮುದ್ರದಲ್ಲಿ ಒಟ್ಟಿಗೆ ಈಜುತ್ತಿದ್ದಾರೆಂದು ಅನ್ನಿಸುತ್ತಿತ್ತು.

ತಾಳೆಯ ಸೇಂದಿ ಖಂಡಿತ ಒಂದು ಶ್ರೇಷ್ಠ ಪಾನೀಯ ಎಂದು ಟೇಪಚೂಗೆ ಕಂಡಿತು. ಆದರೆ, ಅದನ್ನು ಹೇಗೆ ಕುಡಿಯುವುದು? ಚಿಕ್ಕಪ್ಪನನ್ನು ಕೇಳುವುದೆಂದರೆ ಅವರಿಂದ ಹೊಡೆತ ತಪ್ಪಿದ್ದಲ್ಲ. ಹೊಡೆತ ತಿನ್ನುವ ಬಗ್ಗೆ ಟೇಪಚೂಗೆ ಅತ್ಯಂತ ಜುಗುಪ್ಸೆಯಿತ್ತು. ಇದಕ್ಕೆ ಅವನು ಒಂದು ಅನುಕೂಲಕರ ಸಮಯವನ್ನು ನಿಗದಿಪಡಿಸಿಕೊಂಡ. ಒಂದು ದಿನ ಬೆಳ್ಳಂಬೆಳಗ್ಗೆ, ಆಗಸದಲ್ಲಿ ಒಂದೆರೆಡು ನಕ್ಷತ್ರಗಳಿರುವಾಗ, ಅವನು ಬಹಿರ್ದೆಸೆಗೆ ಹೋಗುವ ನೆಪದಲ್ಲಿ ಮನೆಯಿಂದ ಹೊರ ಹೋದ.

ತಾಳೆ ಮರದ ಎತ್ತರ ಮತ್ತು ಆ ಎತ್ತರದಲ್ಲಿ ನೇತುಹಾಕಿದ ಪಕ್ವಗೊಂಡ ಲಿಂಬೆ ಬಣ್ಣದ ಮಡಿಕೆ ಅವನನ್ನು ಭಯಭೀತಗೊಳಿಸುತ್ತಿರಲಿಲ್ಲ, ಪ್ರತಿಯಾಗಿ ಅದೃಶ್ಯ ಬೆರಳುಗಳಿಂದ ಸಂಜ್ಞೆ ಮಾಡಿ ಅವನನ್ನು ಆಹ್ವಾನಿಸುತ್ತಿದ್ದವು. ತಾಳೆ ಮರದ ಕೊಂಬೆಗಳು ಕೈಬೀಸಿ ಸೇಂದಿಯ ರುಚಿಯ ಬಗ್ಗೆ ಹೇಳುತ್ತಿದ್ದವು. ಟೇಪಚೂಗೆ, ಛಪರಾ ಜಿಲ್ಲೆಯ ಲಾಠಿವರಸೆಗಾರ ಮದನಾ ಸಿಂಗ್ ತಾಳೆ ಮರಗಳ ರಕ್ಷಣೆಗೆ ನೇಮಕಗೊಂಡಿದ್ದ ವಿಷಯ ತಿಳಿದಿತ್ತು. ಮದನಾ ಸಿಂಗ್ ತಾಳೆ ಸೇಂದಿಯ ಅಮಲಿಗೊಳಗಾಗಿ ಗೊರಕೆ ಹೊಡೆಯುತ್ತಿರಬೇಕೆಂಬ